Presented on : 05-11-2011
Registered on : 05-11-2011
Decided on : --
Duration :

**IN THE COURT OF IV ADDL. CIVIL JUDGE & JMFC**
**AT BELGAUM**
**(PRESENTED OVER BY SMT.VIJAYALAXMI.GHANAPUR)**

**O.S./0001402/2011**

**APPELLANTS**

1. KHUTEJABI W/O. ABDULSALAM CHONCHE
SHAINAZ BUILDING PLOT NO. 59 7TH CROSS AZAMNAGAR BELGAUM.

VERSUS

**RESPONDENTS**

1. THE CITY CORPORATION BELGAUM.
REPRESENTED BY ITS COMMISSIONER OFFICE AT SUBHASH NAGAR BELGAUM.
2. RAFIQ KHUTUBUDDIN INAMDAR
4817/26 SUBHASH NAGAR BELGAUM.
3. SHAFI S/O. ABUDLMAJID DARGA
H.NO 2517 MALI GALLI BELGAUM.
4. MOHAMMED ABDULMAJID DARGA
-DO-
5. SHADAF S/O. ABDULMAJID DARGA
-DO-
6. MUKADAR S/O. ABDULMAJID DARGA
-DO-
7. SHIKANDAR S/O. ABDULMAJID DARGA
-DO-
8. NAFEESA D/O. ABDULMAJID DARGA
-DO-
9. MADINA D/O ABDULMAJID DARGA
-DO-
10. SAMINA D/O. ABDULMAJID DARGA
-DO-

--------------------------------------------------------------------------------
G.G.PATIL, Advocate for the appellant.
--------------------------------------------------------------------------------

**ಸಾಕ್ಷಿದಾರರನ್ನು ದಿನಾಂಕಃ 12-1-2016 ರಂದು ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀಸವಾಲು ಃ ಶ್ರೀ ಆರ ಆಯ ಜಿ ಪ್ರತಿವಾದಿ ನಂಃ 7 ಪರ ವಕೀಲರಿಂದಃ**

**ನಾನು ದಾವೆಯನ್ನು ಮೂಲತಃ ಹೂಡಿಲ್ಲ ಆದರೆ ನಮ್ಮ ಪತ್ನಿಯವರು ದಾವೆ ಹೂಡಿರುತ್ತಾರೆ. ವಕೀಲರಿಗೆ ಎಲ್ಲಾ ಮಾಹಿತಿಯನ್ನು ನಮ್ಮ ಪತ್ನಿ ನೀಡಿದ್ದಾರೆ ಆದ್ದರಿಂದ ನನಗೆ ದಾವೆಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾವು ಈ ದಾವೆಯನ್ನು ಹೂಡಿದ ದಿನಾಂಕ ಖಚಿತವಾಗಿ ಹೇಳಲು ಬರುವದಿಲ್ಲ ಆದರೆ 2011 ನೇ ಇಸ್ವಿಯಲ್ಲಿ ಹೂಡಿದ್ದೇವೆ. ದಾವೆಯನ್ನು ದಾವಾ ಆಸ್ತಿಯು ನಮ್ಮದು ಇರುತ್ತದೆ ಅದು ನಮ್ಮ ಪರವಾಗಿ ಆಗಬೇಕೆಂದು ಕೇಳಿಕೊಂಡು ಹೂಡಿರುತ್ತೇವೆ.**

**ನಮಗೆ ದಾವಾ ಆಸ್ತಿಯು ಅಬ್ದುಲ ಖಾದರ ಖತಾಲಸಾಲ ಮುಜಾವರ, ಮತ್ತು ಮಹಮ್ಮದ ಸಾದೀಕ ಅವರು ದಾನ ಮಾಡಿದ ಕಾರಣ ನಾವು ಪಡೆದುಕೊಂಡಿದ್ದೇವೆ. ಸದರಿಯವರು ನಮ್ಮ ಪತ್ನಿಯ ಸಂಬಂಧಿಕರಾಗಬೇಕು. ಅಂದರೆ ನನ್ನ ಪತ್ನಿ ಅವರ ತಂಗಿಯಾಗಬೇಕು. ನನ್ನ ಪತ್ನಿಯು ಸದರಿಯವರ ತಂಗಿಯಾಗಬೇಕು ಎಂದು ನಮ್ಮ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿಯವರು ಯಾವಾಗಿನಿಂದ ಪರಿಚಯವಿರುತ್ತಾರೋ ಅದನ್ನು ಸಹ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಖತಾಲಸಾಬ ಮುಜಾವರ ಅವರ ಅಜ್ಜನದು ಇರುತ್ತದೆ. ಸದರಿ ಮುಜಾವರ ಮತ್ತು ಸಾದೀಕ ಅವರನ್ನು ಹೊರತುಪಡಿಸಿ ದಾವಾ ಆಸ್ತಿಯ ಮೇಲೆ ಬೇರೆ ಯಾರದು ಹಕ್ಕು ಇಲ್ಲ. ಅವರಿಬ್ಬರೂ ಅಣ್ಣ ತಮ್ಮಂದಿರನ್ನು ಹೊರತುಪಡಿಸಿ ಬೇರೆ ಯಾರು ಇಲ್ಲ ಎಂದರೆ ನನಗೆ ಗೊತ್ತಿಲ್ಲ.**

**ದಾವಾ ಆಸ್ತಿಯನ್ನು ಹೊರತುಪಡಿಸಿ ಸದರಿ ಮುಜಾವರ ಅವರಿಗೆ ಬೇರೆ ಜಮೀನುಗಳು 28 ಎಕರೆ ಸಹ ಇವೆ. ಅವುಗಳು ಆರ ಎಸ ನಂಃ 1012 ಮತ್ತು 1004 ಇರುತ್ತವೆ. ದಾವಾ ಜಮೀನು ಸದರಿ ಆರ ಎಸ ನಂಬರನಲ್ಲಿ ಬರುತ್ತದೆ. ದಾವಾ ಜಮೀನಿನ ಆರ ಎಸ ನಂಃ 1012-ಎ. ನನ್ನ ಪತ್ನಿಗೆ ದಿನಾಂಕಃ 2-9-1994 ನಲ್ಲಿ ಮೌಖಿಕ ದಾನವನ್ನು ನೀಡಿರುತ್ತಾರೆ. ಮತ್ತು 3-9-1994 ರಲ್ಲಿ ದಾನ ಕೊಟ್ಟವರ 2 ಪ್ರಮಾಣ ಪತ್ರಗಳನ್ನು ಮಾಡಿರುತ್ತಾರೆ. ದಾನ ಮಾಡುವ ಸಮಯದಲ್ಲಿ ಅಬ್ದುಲ ರಸೀದ, ಚಾಂದಸಾಬ ಚಜ್ಜು ಅವರು ಹಾಜರು ಇರುತ್ತಾರೆ. ಪ್ರಮಾಣ ಪತ್ರಗಳ ಮೇಲೆ ನೀಡಿದವರ ಸಹಿ ಮಾತ್ರ ಇರುತ್ತದೆ ಮತ್ತು ವಕೀಲರ ಸಹಿ ಇರುತ್ತದೆ. ನನಗೆ ಮೌಖಿಕ ದಾನದಲ್ಲಿ ಬೇರೆ ಬೇರೆ ರೀತಿ ಇರುವ ದಾನಗಳು ಗೊತ್ತಿಲ್ಲ. ಸದರಿ ದಾನವನ್ನು ನಾವು ನೋಟರಿ ಮಾಡಿಸಿದ್ದೇವೆ. ದಾನ ಮಾಡುವ ಸಮಯದಲ್ಲಿ**

ನಾನು ಹಾಜರಿದ್ದೆ, ನಾನು ಸಹ ನನ್ನ ಸಹಿಯನ್ನು ಮಾಡಿರುವದಿಲ್ಲ. ಸದರಿ ಮುಜಾವರ ಅವರು ಮಾಲೀಕರು ಇರುತ್ತಾರೆ ಎಂದು ಮಾತ್ರ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾವು ಪಹಣಿ ಪತ್ರಿಕೆಗಳನ್ನು ನಾವು ನೋಡಿರುತ್ತೇವೆ ಅದರಲ್ಲಿ ಅವರ ಹೆಸರುಗಳು ನಮೂದು ಇದ್ದವು ಎಂದು ಹೇಳುತ್ತಾರೆ. ದಾನ ಮಾಡಿದ ಜಾಗ ಎಂದರೆ ಸಿಟಿಎಸ ನಂಃ 4817-26, ವಿಸ್ತೀರ್ಣ 6.6 ಸ್ಕೇರ ಮೀಟರ ಇರುತ್ತದೆ. ಎಷ್ಟು ಸ್ಕೇರ ಪೀಟ ಆಗುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ. ಸದರಿ ಆಸ್ತಿಯು ಉತ್ತರ ದಕ್ಷಿಣ 65 ಪೂಟು ಅಗಲು ಮತ್ತು ಪೂರ್ವ ಪಶ್ಚಿಮ 95 ಪೂಟು ಉದ್ದ ಇರುತ್ತದೆ. ದಾವಾ ಆಸ್ತಿಯು ಖುಲ್ಲಾ ಜಾಗವಿರುತ್ತದೆ.

ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ ಃ ಬಾಳೇಕುಂದ್ರಿಯವರ ಆಸ್ತಿ ಮತ್ತು ಪಶ್ಚಿಮಕ್ಕೆ ಃ ರಸ್ತೆ, ಉತ್ತರಕ್ಕೆ ಃ ಮುಜಾವರ ಅವರ ಮಿಕ್ಕಿದ ಆಸ್ತಿ, ದಕ್ಷಿಣಕ್ಕೆ ಸಹ ಮುಜಾವರ ಅವರ ಮಿಕ್ಕಿದ ಆಸ್ತಿ ಇರುತ್ತದೆ. ಸದರಿ ಮಿಕ್ಕಿದ ಆಸ್ತಿ ಒಂದೇ ಸಿಟಿಎಸ ನಂಬರನಲ್ಲಿ ಬರುತ್ತದೆ. ಇವತ್ತಿಗೂ ಸಹ ಇವೇ ಚಕಬಂದಿಗಳು ಇವೆ ಅಂದರೆ ಸರಿ. ದಾವಾ ಆಸ್ತಿ ರಫೀಕ ಇನಾಮದಾರ ಅವರು ಕಬ್ಜೆ ಮಾಡಿರುತ್ತಾರೆ. ನಮಗೆ ಸದರಿಯವರು ಅತಿಕ್ರಮಣ ಮಾಡಿರುವ ಬಗ್ಗೆ 2011 ನೇ ಇಸ್ವಿಯಲ್ಲಿ ಗೊತ್ತಾಯಿತು. ಆ ಅತಿಕ್ರಮಣದ ಅಳತೆಯನ್ನು ಖಚಿತವಾಗಿ ನನಗೆ ಹೇಳಲು ಬರುವದಿಲ್ಲ. ಅತಿಕ್ರಮಣ ಮಾಡಿ ಮನೆಯನ್ನು ಕಟ್ಟಿದ ಮೇಲೆ ಸ್ವಲ್ಪ ಖುಲ್ಲಾ ಜಾಗವು ಇದೆ. ದಾನ ಮಾಡಿದ ಮಾಲಕರಿಗೆ ಸರ್ಕಾರದ ವಿರುದ್ದ ದಾವೆಗಳು ಇವೆ ಎಂದರೆ ಸಾಕ್ಷಿದಾರರು ಇಲ್ಲ ಎಂದು ಹೇಳುತ್ತಾರೆ. ಕಾರ್ಪೋರೇಶನ ವಿರುದ್ದ ಸಹ ದಾವೆಗಳು ಇವೆ ಎಂದರೆ ಇಲ್ಲ ಎಂದು ಹೇಳುತ್ತಾರೆ. ನನಗೆ ಸದರಿ ದಾವಾ ಹೂಡಿದ ನಂತರ ದಾವಾ ಆಸ್ತಿಯ ಮೇಲೆ ವ್ಯಾಜ್ಯಗಳು ಇವೆ ಎಂದು ಗೊತ್ತಾಯಿತು.

ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ ಕಾರಣ ಸಮಯವನ್ನು ನೀಡಿ ಮುಂದೂಡಲಾಯಿತು.

Sd/-
IV ADDL. CIVIL JUDGE & JMFC
BELGAUM